ಹುಡುಕಾಡಲು ಶುರುವಿಟ್ಟ. ತುಸುಹೊತ್ತಿನಲ್ಲಿ ಎಂಟ್ಹತ್ತು ವೆಬ್‌ಸೈಟುಗಳು ತೆರೆದುಕೊಂಡು, ಹತ್ತಾರು ಮಾರ್ಗಸೂಚಿಗಳನ್ನು ಓದುತ್ತಾ ಕಣ್ಣು ಮಂಜಾದವು. ದಾರಿಗಾಣದೆ ಬ್ಯಾಂಕಿನ ಎಲ್ಲಾ ವಾಟ್ಸ್‌ಆ್ಯಪ್ ಗ್ರೂಪುಗಳಲ್ಲಿ ಮೆಸೇಜ್ ಕಳಿಸಿಬಿಟ್ಟ. ಆದರೆ, ಎಲ್ಲರೂ ತಲೆಗೊಂದು ಪ್ರಕ್ರಿಯೆಯ ಬಗ್ಗೆ ಮಾತನಾಡುತ್ತಾ ಇನ್ನಷ್ಟು ಗೊಂದಲ ಹೆಚ್ಚಿಸಿದರು. ಅಷ್ಟರಲ್ಲಿ ಒಬ್ಬರು ಕೊಲೀಗ್ ಎರಡು ಡಾಕ್ಯುಮೆಂಟ್ ಕಳಿಸಿ, ಇದರಲ್ಲಿರುವುದಷ್ಟನ್ನೇ ಮಾಡಿ ಎಂದರು. ಪರಿಚಯದ ಬ್ಯಾಂಕ್ ಗ್ರಾಹಕರೊಬ್ಬರು ಇ–ಪಾಸ್ ಬೇಗ ಸಿಗುವಂತೆ ಸಹಾಯ ಮಾಡಿದರು. ಖುದ್ದು ಬ್ರಾಂಚ್ ಮ್ಯಾನೇಜರ್ ಆವತ್ತು ರಾತ್ರಿಗೇ ವಿಮಾನದ ಟಿಕೆಟ್ ಬುಕ್ ಮಾಡಿಸಿ ವಾಟ್ಸ್‌ಆ್ಯಪ್‌ನಲ್ಲಿ ಕಳಿಸಿ, ನಿಧಾನವಾಗಿ ಗೂಗಲ್ ಪೇ ಮಾಡಿ, ಪರವಾಗಿಲ್ಲವೆಂದು ಇನ್ನೊಂದು ಮೆಸೇಜ್ ಕಳಿಸಿದರು.

ಕ್ರಮೇಣ ಎಲ್ಲಾ ದಾಖಲೆಗಳು ಸಿದ್ಧವಾಗುತ್ತಾ ಮಧ್ಯೆ ತನ್ನ ಬ್ಯಾಗ್ ಪ್ಯಾಕ್ ಮಾಡಿಕೊಂಡು ಓಲಾ ಟ್ಯಾಕ್ಸಿ ಬುಕ್ ಮಾಡಲು ಅನುವಾಗುವಷ್ಟರಲ್ಲಿ ಬೆಂಗಳೂರಿನಿಂದ ಮೂರ್ತಿ ಅಂಕಲ್ ಫೋನ್ ಮಾಡಿ, "ಮಾಮೂಲಿ ಫ್ಲೂ ಅಂತ ಕಾಣತ್ತೆ, ಕೊರೊನಾ ಸೂಚನೆಗಳಿಲ್ಲ, ಬರೋದೇನು ಬೇಡ ಬಿಡು" ಅಂದರು. ರಾಜೇಶನಿಗೆ ಸಮಾಧಾನವಾಗುವ ಮಾತೇ ಇರಲಿಲ್ಲ. "ಇಲ್ಲ ಬರ್ತಿದೀನಿ, ಎಲ್ಲಾ ಬುಕ್ ಆಗಿದೆ" ಎಂದು ಫೋನ್ ಕಟ್ ಮಾಡಿ ಟ್ಯಾಕ್ಸಿ ಬುಕ್ ಮಾಡಿದ. ಅವನ ನಿರ್ಧಾರ ದೃಢವಾಗಿತ್ತು. ಏನಾದರಾಗಲಿ, ತಾನೂ ಬೆಂಗಳೂರಲ್ಲಿ ಹೋಂ ಕ್ವಾರಂಟೈನ್ ಆಗಿ ಅಪ್ಪನ ಜೊತೆ ಸ್ವಲ್ಪ ದಿನ ಕಳೆಯುವುದು. ಅವರು ಪೂರ್ತಿ ಹುಷಾರಾದಮೇಲೆ ಕೆಲವು ದಿನಗಳ ಮಟ್ಟಿಗಾದರೂ ಇಲ್ಲಿಗೇ ಕರೆದುಕೊಂಡು ಬಂದುಬಿಡೋದು. ನಾನು ಹಲ್ಲಿ ನೋಡಿ ಹೆದರಿದರೆ ಅವರು ಗದರಲಿ.

ಮತ್ತೊಮ್ಮೆ ಎಲ್ಲಾ ದಾಖಲೆ ಪರಿಶೀಲಿಸಿಕೊಳ್ಳುವಷ್ಟರಲ್ಲಿ ಟ್ಯಾಕ್ಸಿ ಬಂದಾಗಿತ್ತು. ಟ್ಯಾಕ್ಸಿಯವನಿಗೆ ಫೋನ್ ಮಾಡಿ, "ದೋ ಮಿನಿಟ್" ಎಂದು ಬ್ಯಾಗ್ ಹೊರಗಿಟ್ಟುಕೊಂಡು, ಮನೆಯೊಳಗೆ ಬಾಗಿಲುಗಳನ್ನು ಭದ್ರಪಡಿಸಿ ಸಿಲಿಂಡರ್ ಆಫ್ ಮಾಡಿದ. ಫ್ಯಾನು ಏಸಿ ಎಲ್ಲಾ ಆಫ್ ಮಾಡಿ ಲೈಟುಗಳನ್ನೂ ಆಫ್ ಮಾಡುವಷ್ಟರಲ್ಲಿ ಕೈ ತಡೆಯಿತು. ಒಮ್ಮೆ ಯೋಚಿಸುವಂತಾಯಿತು ರಾಜೇಶನಿಗೆ. ತಾನು ಬರುವುದು ಮೂರು ವಾರಗಳೇ ಆಗಬಹುದು. ಅಲ್ಲಿಯವರೆಗೆ ಲೈಟ್ ಆನ್ ಇದ್ದರೆ ತಾನಿದ್ದೇನೆಂದು ತಿಳಿದು ಹಲ್ಲಿ ಹೆಚ್ಚು ಓಡಾಡದೆ ಒಂದೇಕಡೆ ಲಾಕ್‌ಡೌನ್ ಆಗಬಹುದು. ಲೈಟ್ ಆಫ್ ಮಾಡಿಹೋದರೆ ಪೂರ್ತಿ ಸ್ವಾತಂತ್ರ್ಯ ಕೊಟ್ಟಂತಾಗಿ ವಾಪಸು ಬರುವಷ್ಟರಲ್ಲಿ ಮನೆ ತುಂಬೆಲ್ಲಾ ಹಲ್ಲಿಗಳು ಓಡಾಡುತ್ತಿರಬಹುದು ಎಂದು ನೆನೆಸಿ ರಾಜೇಶನಿಗೆ ಕಸಿವಿಸಿಯಾಯಿತು. ಹಾಗಾದರೆ, ಅದರ ಮೇಲೆ ಲಾಕ್‌ಡೌನ್ ಹೇರಿ ಹೊರಟುಹೋಗಲೆ? ಲೈಟ್ ಉರಿಸಲೇ, ಆಫ್ ಮಾಡಲೇ?! ಟ್ಯಾಕ್ಸಿಯವನು ಮತ್ತೆ ಫೋನ್ ಮಾಡಿದ, ಬೇಗ ಬನ್ನಿ ಸರ್ ಎನ್ನಲು ಇರಬೇಕು. ರಾಜೇಶ ತನ್ನ ಇಲ್ಲಿಯವರೆಗಿನ ಲಾಕ್‌ಡೌನ್ ಅನುಭವದ ಬಗ್ಗೆ ಒಮ್ಮೆ ಯೋಚಿಸಿದ. ಅನುಮಾನವೇ ಉಳಿಯದಂತಾಯಿತು. ಲೈಟ್ ಆಫ್ ಮಾಡಿ ಬೀಗಹಾಕಿ ಡ್ರೈವರನ ಕರೆ ಸ್ವೀಕರಿಸಿ, "ಆ ರಹಾ ಹೂಂ" ಎಂದ.

**ಅವಿರತ ಮಾವಿನಕುಳಿ**

ಹುಟ್ಟಿದ್ದು ಮತ್ತು ಬೆಳೆದದ್ದು ಮೈಸೂರಿನಲ್ಲಿ. ಸದ್ಯ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಮುಂಬಯಿಯಲ್ಲಿ ವಾಸ.